ದಿವ್ಯೋನ್ಮಾದ ಸ್ಥಿತಿಯಲ್ಲಿದ್ದವರು; ಸಮಾಜದ ಪ್ರತಿಷ್ಠಿತ ವರ್ಗಕ್ಕೆ ಯಾವುದೇ ಸೊಪ್ಪುಹಾಕದ ಸ್ವಾಭಿಮಾನಿಗಳು. ಇಂಥ ವಿನಯ ಮತ್ತು ತ್ಯಾಗಗಳು ಅವರನ್ನು ನಮ್ಮ ಹೃದಯಕ್ಕೆ ಹತ್ತಿರವಾಗಿಸುತ್ತವೆ, ಆರಾಧನಾಮೂರ್ತಿಯಾಗಿಸುತ್ತವೆ.

**೭. ಸರ್ವಸಮನ್ವಯ :** ಸಾಮಾನ್ಯವಾಗಿ ಧಾರ್ಮಿಕ ಮುಖಂಡರು ಯಾವುದೋ ಒಂದು ನಿರ್ದಿಷ್ಟ ಸಿದ್ಧಾಂತ, ಜಾತಿ, ಪಂಗಡಗಳಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡಿರುತ್ತಾರೆ. ಆದರೆ ಶ್ರೀರಾಮಕೃಷ್ಣರು ಹೃದಯಪೂರ್ವಕವಾಗಿ, ಎಲ್ಲ ಜಾತಿ ಪಂಗಡಗಳನ್ನೂ ಒಪ್ಪಿಕೊಂಡರು. ಅವೆಲ್ಲವೂ ಭಗವಂತನನ್ನು ಸೇರುವ ಮಾರ್ಗಗಳು ಎಂದು ಘಂಟಾಘೋಷವಾಗಿ ಸಾರಿದರು. ಹಾಗೆ ಹೇಳುವ ಮೊದಲು ತಾವೇ ಆ ಮಾರ್ಗಗಳಲ್ಲಿ ಸಾಧನೆಗೈದು, ಸಾಕ್ಷಾತ್ಕರಿಸಿಕೊಂಡರು. ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ಸಾಧನೆಯನ್ನೂ ಮಾಡಿದರು. ಹೀಗಾಗಿ ನಿಜವಾದ ಸಮನ್ವಯವನ್ನು ಶ್ರೀರಾಮಕೃಷ್ಣರಲ್ಲಿ ನಾವು ನೋಡುತ್ತೇವೆ. ಇದು ಇಂದು ಅತ್ಯಗತ್ಯವಾಗಿ ಬೇಕಾದ ಸಾರ್ವತ್ರಿಕ ಮೌಲ್ಯ.

**೮. ಭೋಗಪ್ರವೃತ್ತಿಗೆ ರಾಮಬಾಣ :** ಭೋಗಪ್ರವೃತ್ತಿ ಮಾನವ ಇತಿಹಾಸದಲ್ಲಿ ಇದ್ದದ್ದೇ. ಆದರೆ ಇಂದು ಅದು ವಿಪರೀತ ಬೆಳೆದು ನಿಂತಿರುವುದನ್ನು ಕಾಣುತ್ತೇವೆ. ಪಾಶ್ಚಾತ್ಯ ಸಂಸ್ಕೃತಿಯ ವಿಕೃತ ಮೌಲ್ಯಗಳ ಅನುಕರಣೆಯು ಸರ್ವತ್ರ ವ್ಯಾಪಿಸಿರುವುದನ್ನು ನೋಡುತ್ತೇವೆ. ಇದು ನಮ್ಮ ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕ ಜೀವನದಲ್ಲಿ ಹಲವಾರು ಗಂಭೀರ ಸಮಸ್ಯೆಗಳನ್ನು ಸೃಷ್ಟಿಸಿದೆ. ಇದಕ್ಕೆ ರಾಮಬಾಣವೆಂದರೆ, ಶ್ರೀರಾಮಕೃಷ್ಣರ ಜೀವನ ಮತ್ತು ಉಪದೇಶ. ಜೀವನದ ಉದ್ದೇಶ ಭಗವಂತನಲ್ಲಿ ಪ್ರೀತಿಯನ್ನು ಬೆಳೆಸಿಕೊಳ್ಳುವುದು. ಭಗವಂತನಲ್ಲಿನ ಆಕರ್ಷಣೆ ಹೆಚ್ಚಾದಂತೆಲ್ಲಾ, ಪ್ರಾಪಂಚಿಕ ಆಸಕ್ತಿ ಕಡಮೆಯಾಗುತ್ತ ಬರುತ್ತದೆ. ಆ ಮೂಲಕ ನಮ್ಮ ಜೀವನದಲ್ಲಿ ಆನಂದ, ನೆಮ್ಮದಿಗಳು ಹೆಚ್ಚಾಗುತ್ತ ಹೋಗುತ್ತವೆ. ಈ ವಿಚಾರಗಳನ್ನು ಶ್ರೀರಾಮಕೃಷ್ಣರು ಪ್ರತಿಪಾದಿಸುತ್ತಾರೆ. ಇವು 'ಭೋಗ'ವೇ ಜೀವನ ಎಂದುಕೊಂಡು, ಅದರಲ್ಲೇ ಸಿಕ್ಕಿ ನರಳುತ್ತಿರುವ ಸಾಮಾನ್ಯ ಜನತೆಗೆ, ಜೀವನದ ನಿಜವಾದ ಅರ್ಥವನ್ನು ಮನಗಾಣಿಸುತ್ತವೆ; ಜೀವನದ ಸಾರ್ಥಕತೆಯ ರಾಜಮಾರ್ಗವನ್ನು ತೋರಿಸುತ್ತವೆ.

**೯. ಸಮಾಜಮುಖಿ ಅಧ್ಯಾತ್ಮ :** ವ್ಯಕ್ತಿಗತ ಮುಕ್ತಿಯೇ ಪ್ರಾಧಾನ್ಯ ಎಂಬ ಅನಿಸಿಕೆ ಸಾಂಪ್ರದಾಯಿಕ ಸಿದ್ಧಾಂತಗಳದ್ದು. ಹೀಗಾಗಿ ಧರ್ಮವು ಸಮಾಜದ ಪ್ರಗತಿಯಲ್ಲಿ ಗಣನೀಯ ಪಾತ್ರವನ್ನು ವಹಿಸಿರಲಿಲ್ಲ. ಧರ್ಮದ ಮೇಲಿದ್ದ ಈ ಕಳಂಕವನ್ನು ಹೋಗಲಾಡಿಸಿದವರು ಶ್ರೀರಾಮಕೃಷ್ಣರು. ಅಧ್ಯಾತ್ಮವೆಂಬುದು ವ್ಯಕ್ತಿಗತ ಕಲ್ಯಾಣಕ್ಕೆ ಹೇಗೆ ಸಹಕಾರಿಯಾಗಿದೆಯೋ, ಸಮಾಜದ ಹಿತಕ್ಕೂ ಪೂರಕವಾಗಿರಬೇಕು ಎಂಬ ಅಂಶವನ್ನು ಮನದಟ್ಟು ಮಾಡಿಕೊಟ್ಟವರು ಅವರು.

**೧೦. ಧರ್ಮದಲ್ಲಿ ದೇವರೇ ಪ್ರಧಾನ :** ಹಳೆಯ ಧಾರ್ಮಿಕ ಪುಸ್ತಕಗಳನ್ನು ಓದುವಾಗ ನಮಗೆ ಅನೇಕ ರೀತಿಯ ಅನುಮಾನಗಳು ಬರುತ್ತವೆ. ನಂಬಿಕೆ, ಆಚರಣೆ, ಬಗೆಬಗೆಯ ತರ್ಕಗಳು – ಇವೇ ಅವುಗಳಲ್ಲಿ ಮುಖ್ಯವಾಗಿಬಿಟ್ಟಿರುತ್ತವೆ. ಆದರೆ ಶ್ರೀರಾಮಕೃಷ್ಣರ ಉಪದೇಶದಲ್ಲಿ ಇವುಗಳಿಗೆ ಸ್ಥಾನವಿಲ್ಲ. **ದೇವರು** ಮತ್ತು ಆತನನ್ನು ಪಡೆಯುವುದಕ್ಕೆ **ವ್ಯಾಕುಲಚಿತ್ತದಿಂದ ಪ್ರಾರ್ಥನೆ, ಧ್ಯಾನ, ಸಾಧನೆ ಮಾಡುವುದು** – ಇವುಗಳಿಗೇ ಶ್ರೀರಾಮಕೃಷ್ಣರು ಮಹತ್ವಕೊಡುತ್ತಾರೆ. ಬೇರೆಲ್ಲವೂ ಅನವಶ್ಯಕವೆಂಬುದೇ ಅವರ ಅಭಿಪ್ರಾಯ. ಇದು ಇಂದಿನ ಕಾಲದ ಪ್ರಾಮಾಣಿಕ ಸಾಧಕರಿಗೆ ಬಹಳವಾಗಿ ಹಿಡಿಸುವ ಭಾವನೆ; ಆಧ್ಯಾತ್ಮಿಕ ಪಿಪಾಸುಗಳಿಗೆ ಬಹಳ ಅವಶ್ಯವಾದ ಉಪದೇಶ. ಸಾಂಘಿಕ ಮತಗಳ, ಸಂಪ್ರದಾಯಗಳ ಗೋಜಲುಗಳಿಂದ ಶುದ್ಧ ಅಧ್ಯಾತ್ಮವನ್ನು ಬಿಡಿಸಿ, ಅದರ ಸುಜಲ ಧಾರೆಯನ್ನು ಶ್ರೀರಾಮಕೃಷ್ಣರು ನೀಡಿದ್ದಾರೆ. ಹೀಗಾಗಿ ಎಲ್ಲ ವರ್ಗಗಳಿಗೆ ಸೇರಿದ ಸಾಧಕರಿಗೂ ಅವರು ದಿಕ್ಸೂಚಿಯಾಗಿ, ದಾರಿಬೆಳಕಾಗಿ ನಿಲ್ಲುತ್ತಾರೆ.

**೧೧. ಮನಸ್ಸಿಗೊಂದು ನೆಮ್ಮದಿಯ ತಾಣ :** ಜೀವನದಲ್ಲಿ ಸರಿಯಾದ ಆದ್ಯತೆ, ಗುರಿ ಮತ್ತು ಯೋಜನೆಗಳು ಇಲ್ಲದಿರುವುದೇ ಮಾನಸಿಕ ಅಶಾಂತಿಗೆ ಕಾರಣ. ಇಂದಿನ ಯುಗ ಅಶಾಂತಿಯ ಯುಗ. ಶಾಂತಿ ದೊರಕುವುದು ಭಗವಂತನ ಸ್ಮರಣೆಯಲ್ಲಿ ಮಾತ್ರವೇ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಭಗವಂತನನ್ನು ನಿಮ್ಮ ಜೀವನದ ಕೇಂದ್ರವನ್ನಾಗಿ ಮಾಡಿಕೊಳ್ಳಿ ಎಂದು ಅವರು ಕರೆಕೊಡುತ್ತಾರೆ. ಭಗವತ್ಸಾಕ್ಷಾತ್ಕಾರವೇ ಜೀವನದ ಉದ್ದೇಶ ಎಂದು ಸಾರಿ ಸಾರಿ ಹೇಳುತ್ತಾರೆ. ಜೀವನದ ಸಾರ್ಥಕತೆಗೆ ಬೇಕಾದ ಸರಿಯಾದ **ಆದ್ಯತೆ, ಗುರಿ** ಮತ್ತು **ಯೋಜನೆ – ಸಾಧನೆ**: ಈ ಮೂರನ್ನೂ ಅವರು ಮಾನವತೆಗೆ ಬೋಧಿಸುತ್ತಾರೆ. ಇವನ್ನು ಅರಿತುಕೊಂಡು, ಪ್ರಾಮಾಣಿಕ ಹಾಗೂ ನಿಷ್ಕಲ್ಮಷ ಮನಸ್ಸಿನಿಂದ ಸಾಧನೆಯಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಮಾತ್ರವೇ ಮಾನಸಿಕ ಶಾಂತಿ ದೊರೆಯಬಲ್ಲುದು. ಹೀಗೆ ನಮಗೆ ಅಗತ್ಯವಾದ ಮೂಲಭೂತ ಜೀವನಮೌಲ್ಯವನ್ನು ಶ್ರೀರಾಮಕೃಷ್ಣರು ಹೇಳಿಕೊಡುತ್ತಾರೆ. ಅಷ್ಟು ಮಾತ್ರವಲ್ಲ, ಆ ಮೌಲ್ಯದ ನೈಜ ಪರಿಪೂರ್ಣ ನಿದರ್ಶನವೂ ಆಗಿದ್ದಾರೆ.

**೧೨. ನೈತಿಕತೆಯ ಪರಮಾದರ್ಶ :** ನೈತಿಕ ಜೀವನವು ಧರ್ಮ ಅಥವಾ ಅಧ್ಯಾತ್ಮದ ಮೊದಲ ಮೆಟ್ಟಿಲು. ಈಗಿನ ಹಲವಾರು ಧಾರ್ಮಿಕ ಮುಖಂಡರು ಅದನ್ನು ಕಡೆಗಣಿಸುತ್ತಿದ್ದಾರೆ. ಹೀಗಾಗಿ ಸಮಾಜಕ್ಕೆ ಆದರ್ಶಪ್ರಾಯರಾಗಿ ನಿಲ್ಲುವಲ್ಲಿ ವಿಫಲರಾಗಿದ್ದಾರೆ. ಈ ಕೊರತೆಯನ್ನು ಶ್ರೀರಾಮಕೃಷ್ಣರು ನೀಗಿಸಬಲ್ಲರು. ಸಮಾಜಕ್ಕೆ, ಅದರಲ್ಲೂ ಯುವಜನಾಂಗಕ್ಕೆ, ನೈತಿಕ ಆದರ್ಶದ ಆವಶ್ಯಕತೆ ಇದೆ. ಶ್ರೀರಾಮಕೃಷ್ಣರು ಅಂತಹ ಪವಿತ್ರ ನೈತಿಕ ಸಂಕೇತವಾಗಬಲ್ಲರು. ಇದು ಅವರ ಜೀವನ ಮತ್ತು ಸಂದೇಶಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

ಈಗ ಹೇಳಿ ನೋಡೋಣ, ಶ್ರೀರಾಮಕೃಷ್ಣರು ಈ ಕಾಲಕ್ಕೆ ಪ್ರಸ್ತುತವೇ, ಇಲ್ಲವೇ ಎಂಬುದನ್ನು. ಬನ್ನಿ, ಶ್ರೀರಾಮಕೃಷ್ಣರ ಪದತಲಗಳಲ್ಲಿ ಶರಣಾಗೋಣ. ಅವರ ಭಾವದಲ್ಲಿ ಮಿಂದು ನಮ್ಮ ಜನ್ಮವನ್ನು ಧನ್ಯರಾಗಿಸಿಕೊಳ್ಳೋಣ.